## ನೀವು ಮಾಡಬೇಕಾದದ್ದು

ಸರಿಯಾದ ಉತ್ತರವಿರುವ ಕಡೆಗೆ X ಗುರುತನ್ನ ಹಾಕಿರಿ

18. ಹೊಸದಾಗಿ ಹುಟ್ಟಿದ ನಿಜ ಶಿಷ್ಯರು

...ಅ) ಕ್ರಿಸ್ತನಲ್ಲಿ ಸಹೋದರ ಮತ್ತು ಸಹೋದರಿಯರಾಗಿರುತ್ತಾರೆ.

...ಆ) ಒಂದೇ ಸಂಸ್ಥೆಯ ಸದಸ್ಯರಾಗಿರುತ್ತಾರೆ

...ಇ) ಒಳ್ಳೆಯ ಸ್ನೇಹಿತರಾಗಿರುತ್ತಾರೆ

ಉತ್ತರ : 18ಅ) ಕ್ರಿಸ್ತನಲ್ಲಿ ಸಹೋದರ ಮತ್ತು ಸಹೋದರಿಯರಾಗಿರುತ್ತಾರೆ.

ಪಾಠ 2

# ನಡೆಯುವುದನ್ನು ಕಲಿಯುವುದು



### ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು:

ದೇವರ ಕೈಯಲ್ಲಿ ನಿಮ್ಮ ಕೈಯನ್ನಿಡಿರಿ

ನೀವು ಬೀಳುವಂತೆ ಸೈತಾನನು ಪ್ರಯತ್ನಿಸಿದ್ದಾನೋ?

ಕ್ರಿಸ್ತನ ನಿಮಿತ್ತ ನೀವು ಹಿಂಸೆ ಅನುಭವಿಸುತ್ತಿದ್ದೀರೋ?

ನೀವು ಕುಂದಿಹೋಗಿದ್ದೀರೋ ಇಲ್ಲವೆ, ನಿಮಗೆ ಸಂದೇಹಗಳಿಂದ ಬಾಧೆಯಾಗಿದೆಯೋ?

ನಿಮ್ಮ ತಂದೆ ನಿಮ್ಮನ್ನು ಪ್ರೀತಿಸುತ್ತಾನೆ

ಈಗ ನಿಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳಿರಿ.

ಪಶ್ಚಾತ್ತಾಪಪಡಿರಿ

ಸುವಾರ್ತೆಯಲ್ಲಿ ನಂಬಿಕೆಡಿಯಿರಿ: ಯೇಸುಕ್ರಿಸ್ತನಲ್ಲಿ ನಂಬಿಕೆಯಿಡಿರಿ

## ದೇವರ ಕೈಯಲ್ಲಿ ನಿಮ್ಮ ಕೈಯನ್ನಿಡಿರಿ

ತಂದೆ ತಾಯಿಗಳಿಗೆ ತಮ್ಮ ಮಗುವು ತನ್ನ ಪ್ರಥಮ ಹೆಜ್ಜೆಗಳನ್ನಿಡುವಾಗ ಎಷ್ಟು ಸಂತೋಷ, ಸ್ವರ್ಗದ ತಂದೆಯ ಮಗುವಾಗಿರುವ ನೀವು ಆತನೊಂದಿಗೆ ನಡೆದಾಡುವಾಗ ಆತನಿಗೆ ಎಷ್ಟು ಸಂತೋಷವಾಗುವುದು! ನೀವು ಬೀಳುವಿರೆಂದು ಭಯಪಡಬೇಡಿರಿ; ನಿಮ್ಮ ಕೈಯನ್ನು ತಂದೆಯ ಕೈಯಲ್ಲಿಟ್ಟರೆ ಆತನು ನಿಮಗೆ ಸಹಾಯಮಾಡುವನು. ನೀವು ಪ್ರತಿದಿನ ಏಳುವಾಗ, ಆ ದಿನದಲ್ಲಿ ನೀವು ಮಾಡುವ ಎಲ್ಲಾ ಕಾರ್ಯಗಳಲ್ಲಿ ಆತನ ಸಹಾಯಕ್ಕಾಗಿ ಕೇಳಿಕೊಳ್ಳಿರಿ.

### ನೀವು ಮಾಡಬೇಕಾದದ್ದು

1. ಈ ಪಾಠದಲ್ಲಿ ಶಿಷ್ಯರಾಗಿರುವ ನಿಮ್ಮ ಜೀವಿತ ಯಾವುದಕ್ಕೆ ಹೋಲಿಸಿದೆ?

...ಅ) ಸ್ವತಃ ನಡೆದಾಡುವ ಮನುಷ್ಯನಿಗೆ

...ಆ) ನಡೆದಾಡಲು ಬಾರದ ಮನುಷ್ಯನಿಗೆ

...ಇ) ದೇವರ ಕೈಯಲ್ಲಿ ನಿಮ್ಮ ಕೈಯನ್ನಿಟ್ಟು ನಡೆದಾಡುವುದಕ್ಕೆ

ಉತ್ತರ : 1ಇ) ದೇವರ ಕೈಯಲ್ಲಿ ನಿಮ್ಮ ಕೈಯನ್ನಿಟ್ಟು ನಡೆದಾಡುವುದಕ್ಕೆ

## ನೀವು ಬೀಳುವಂತೆ ಸೈತಾನನು ಪ್ರಯತ್ನಿಸಿದ್ದಾನೋ?

ಸೈತಾನನು ದೇವರ ಮತ್ತು ಪ್ರತಿಶಿಷ್ಯನ ಶತ್ರುವಾಗಿದ್ದಾನೆ. ನಿಮ್ಮನ್ನು ಮುಗ್ಗಲಿಸಲು ಮತ್ತು ಬೀಳಿಸಲು ಪ್ರಯತ್ನಿಸುತ್ತಾನೆ. ಅವನು ಹಿಂಸೆ, ಅಪಹಾಸ್ಯ ಕುಂದಿ ಹೋಗುವಿಕೆ ಇಲ್ಲವೆ ಶೋಧನೆಗಳನ್ನು ಉಪಯೋಗಿಸಬಹುದು. ನೀವು ರಕ್ಷಿಸಲ್ಪಟ್ಟಿದ್ದೀರೋ ಎಂದು ನಿಮ್ಮಲ್ಲಿ ಸಂದೇಹವನ್ನುಂಟು ಮಾಡುತ್ತಾನೆ. ಸೈತಾನನು ಯಾವಾಗಲೂ ಶಿಷ್ಯರ ವಿರುದ್ಧ ಹೋರಾಡುವವನಾಗಿದ್ದು ಅವರನ್ನು ದೇವರ ಬಳಿಯಿಂದ ದೂರ ಮಾಡಲು ಯತ್ನಿಸುತ್ತಾನೆ. ಅವನು ವಿಶೇಷವಾಗಿ ಹೊಸ ವಿಶ್ವಾಸಿಗಳನ್ನು ಸಂದೇಹಗಳಿಂದ ಮತ್ತು ಕಷ್ಟಗಳಿಂದ ಕಳವಳಪಡಿಸುತ್ತಾನೆ. ನೀವು ದೇವರೊಂದಿಗೆ ನಡೆಯುವುದನ್ನು ಕಲಿಯುವುದು ಅವನಿಗೆ ಇಷ್ಟವಿಲ್ಲ.

ಆದುದರಿಂದ ನೀವು ನಡೆಯುವುದನ್ನು ಕಲಿಯುವಾಗ ಇಂಥ ಕೆಲವು ಪೆಟ್ಟುಗಳನ್ನು ಎದಿರಿಸುವಾಗ ಚಕಿತರಾಗದಿರಿ. ಒಂದು ಮಗುವು ನಡೆಯುವ ಪ್ರಯತ್ನದಲ್ಲಿ

ಕುರ್ಚಿಗೆ ತಾಗಿ ನೋವಾಗಬಹುದು ಇಲ್ಲವೆ ಆಯ ತಪ್ಪಿ ಬೀಳಬಹುದು. ಆದರೆ ಹಾಗೆ ಇದು ತಿರುಗಿ ಎದ್ದು ನಡೆಯಲು ಪ್ರಯತ್ನಿಸದೆ ಇರುವುದಕ್ಕೆ ಕಾರಣವಲ್ಲ.

**ನೀವು ಮಾಡಬೇಕಾದದ್ದು**

2. ನೀವು ಶಿಷ್ಯರಾದ ಮೇಲೆ
   ...ಅ) ನಿಮ್ಮ ಸಮಸ್ಯೆಗಳೆಲ್ಲ ಪರಿಹಾರವಾದವು
   ...ಆ) ಸೈತಾನನು ನೀವು ಬೀಳುವಂತೆ ಯತ್ನಿಸುತ್ತಾನೆ .
   ...ಇ) ನಿಮಗೆಂದಿಗೂ ಹಿಂಸೆ ಮತ್ತು ಕುಂದಿಹೋಗುವಿಕೆ ಉಂಟಾಗುವುದಿಲ್ಲ.

3. ಸೈತಾನನು ಹೊಸ ವಿಶ್ವಾಸಿಗಳನ್ನು ಪದೇಪದೇ ಪ್ರಯತ್ನಿಸುವುದು
   ...ಅ) ಅವರ ರಕ್ಷಣೆಯಲ್ಲಿ ಆನಂದಿಸುವಂತೆ
   ...ಆ) ದೇವರ ಇರುವಿಕೆಯನ್ನು ಸಂದೇಹಿಸುವಂತೆ
   ...ಇ) ಅವರು ರಕ್ಷಿಸಲ್ಪಟ್ಟಿದ್ದಾರೋ ಎಂದು ಸಂದೇಹಿಸುವಂತೆ

**ಉತ್ತರಗಳು** : 2ಆ) ಸೈತಾನನು ನೀವು ಬೀಳುವಂತೆ ಯತ್ನಿಸುತ್ತಾನೆ. 3ಇ) ಅವರು ರಕ್ಷಿಸಲ್ಪಟ್ಟಿದ್ದಾರೋ ಎಂದು ಸಂದೇಹಿಸುವಂತೆ

ಒಂದು ಸಂಗತಿಯನ್ನು ನೆನಪಿನಲ್ಲಿಡಿ. ನಿಮ್ಮ ಸ್ವರ್ಗದ ತಂದೆಯು ಸೈತಾನನಿಗಿಂತ ಬಲಶಾಲಿಯಾಗಿದ್ದಾನೆ ಮತ್ತು ಆತನು ನಿಮ್ಮ ಕೈಯನ್ನು ಹಿಡಿಯುತ್ತಾನೆಂದು ನೆನಪಿನಲ್ಲಿಟ್ಟುಕೊಳ್ಳಿರಿ.

ಯೋಹಾನ 10:28 ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ ಅವು ಎಂದಿಗೂ ನಾಶವಾಗುವುದೇ ಇಲ್ಲ; ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಿದುಕೊಳ್ಳರು.

**ನೀವು ಮಾಡಬೇಕಾದದ್ದು**

4. ಯೋಹಾನ 10:28ರಲ್ಲಿ ಯೇಸು ಹೇಳಿದ ಮಾತುಗಳನ್ನು ಬಾಯಿಪಾಠ ಮಾಡಿರಿ.

## ಕ್ರಿಸ್ತನ ನಿಮಿತ್ತ ನೀವು ಹಿಂಸೆ ಅನುಭವಿಸುತ್ತಿದ್ದಿರೋ?

ನೀವು ಕ್ರಿಸ್ತನನ್ನು ಅಂಗೀಕರಿಸಿದ್ದಕ್ಕಾಗಿ ನಿಮ್ಮ ಕುಟುಂಬದವರು ಅಥವಾ ನಿಮ್ಮ ಸ್ನೇಹಿತರು ನಿಮ್ಮನ್ನು ಕುರಿತು ಹಾಸ್ಯ ಮಾಡಿದರೆ ವಿಸ್ಮಿತರಾಗದಿರಿ. ಅವರು ನಿಮ್ಮನ್ನು ಹಿಂಸಿಸಬಹುದು. ಹೀಗಾದರೆ ನಮಗಾಗಿ ಶಿಲುಬೆಯ ಮೇಲೆ ಪ್ರಾಣ ಕೊಟ್ಟಾತನಿಗಾಗಿ ಇದು ಒಂದು ಸನ್ಮಾನವು ಮತ್ತು ಸದಾವಕಾಶವೂ ಆಗಿರುತ್ತದೆ. ಆತನು ನಮಗಾಗಿ ಶ್ರಮೆ ಅನುಭವಿಸಿದ್ದನ್ನು ನಾವು ಮೆಚ್ಚಿದ್ದೇವೆಂದು ತೋರಿಸುವುದಕ್ಕಾಗಿ ನಾವು ನಮ್ಮ ಶಿಲುಬೆಯನ್ನು ಹೊತ್ತುಕೊಂಡು ಆತನನ್ನು ಹಿಂಬಾಲಿಸುತ್ತೇವೆ.

ಅದು ಅಲ್ಲದೆ, ತನಗಾಗಿ ಹಿಂಸೆ ಅನುಭವಿಸುವವರಿಗೆ ಕರ್ತನು ಬಹುಮಾನ ಕೊಡುವುದಾಗಿ ವಾಗ್ದಾನ ಮಾಡಿದ್ದಾನೆ.

ಲೂಕ **9:23** "ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ."

ಮತ್ತಾಯ **5:10-12** ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು; ಪರಲೋಕರಾಜ್ಯವು ಅವರದು, ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. ಸಂತೋಷಪಡಿರಿ; ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವುದು.

### ನೀವು ಮಾಡಬೇಕಾದದ್ದು

5. ನೀವು ಯೇಸುಕ್ರಿಸ್ತನಿಗಾಗಿ ಶ್ರಮೆ ಅನುಭವಿಸುವಾಗ ನಿಮಗೆ ಅನಿಸುವಿಕೆಯು

...ಅ) ದುಃಖಭರಿತ ಮತ್ತು ಕುಂದಿದಂತೆ ಆಗಿರಬೇಕು

...ಆ) ಕೋಪವುಳ್ಳದ್ದು ಮತ್ತು ಜಗಳಕ್ಕೆ ಸಿದ್ಧವುಳ್ಳದ್ದು ಆಗಿರಬೇಕು.

...ಇ) ಸ್ವರ್ಗದಲ್ಲಿ ಬಹುಮಾನ ಸಿಕ್ಕುವುದೆಂದು ಸಂತೋಷಪಡಬೇಕು.

**ಉತ್ತರ** : 5ಇ) ಸ್ವರ್ಗದಲ್ಲಿ ಬಹುಮಾನ ಸಿಕ್ಕುವುದೆಂದು ಸಂತೋಷಪಡಬೇಕು.

## ನೀವು ಕುಂದಿ ಹೋಗಿದ್ದೀರೋ ಇಲ್ಲರೆ ಸಂದೇಹಗಳಿಂದ ಬಾಧೆಯಾಗಿದೆಯೋ?

ನೀವು ಒಳ್ಳೆಯದನ್ನು ಮಾಡುವುದಕ್ಕೆ ಕಠಿಣತೆಯನ್ನು ಎದುರಿಸುತ್ತಿರುವುದಾದರೆ ಕುಂದಿಹೋಗಬೇಡಿರಿ. ಒಬ್ಬ ವ್ಯಕ್ತಿಯು ಹೊಸದಾಗಿ ಹುಟ್ಟಿದಾಗಲೇ ದೇವರ ಮಗುವಾಗಿದ್ದಾನೆ, ಆದರೆ ಆತನು ಹೇಗೆ ನಡೆಯಬೇಕೆಂಬುದನ್ನು ಇನ್ನು ಕಲಿಯಬೇಕು. ಒಬ್ಬ ಹೊಸ ಶಿಷ್ಯನು ತಪ್ಪು ಮಾಡಿದಾಗ ಸೈತಾನನು ಅವನನ್ನು ಕುಂದಿಸಿ ಹೀಗೆ ಯೋಚಿಸುವಂತೆ ಮಾಡುತ್ತಾನೆ: "ನಾನು ಮಾಡಿದ್ದೇನೆಂದು ನೋಡು, ನಾನೆಂದಿಗೂ ದೇವರ ಮಗುವಾಗಿರಲು ಸಾಧ್ಯವಿಲ್ಲ ಯಾಕಂದರೆ ಹೀಗೆ ವ್ಯತಿರಿಕ್ತವಾಗಿ ವರ್ತಿಸುತ್ತಿದ್ದಿಲ್ಲ."

ಕೆಲವು ಹೊಸ ಶಿಷ್ಯರು ಕಳವಳಗೊಂಡು ಸಂದೇಹಕ್ಕೆ ಮಾರ್ಗ ಮಾಡಿಕೊಡುತ್ತಾರೆ. ಅವರು ಯೋಚಿಸುವುದು; "ನಾನು ಕ್ರಿಸ್ತನ ಹಾಗೆ ಜೀವಿಸಲಾರೆ; ಅದು ಬಹು ಕಷ್ಟಕರ. ನಾನು ನನ್ನ ಹಳೆಯ ಜೀವಿತಕ್ಕೆ ಹಿಂದಿರುಗಿ ಹೋಗಿ ದೇವರನ್ನೇ ಸೇವಿಸದೇ ಇರುತ್ತೇನೆ. ಅದು ಅಲ್ಲದೆ, ಶಿಷ್ಯರು ಮಾತಾಡಿಕೊಳ್ಳುವಂತೆ ದೊಡ್ಡ ಬದಲಾವಣೆಯು ನನ್ನಲ್ಲಿ ಬಂದಿಲ್ಲ. ರಕ್ಷಣೆಯ ಆನಂದದ ಅನಿಸುವಿಕೆಯು ಇಲ್ಲ. ನಾನು ಶಿಷ್ಯನೇ ಅಲ್ಲ ಎಂದು ತಿಳಿಯುತ್ತೇನೆ."

ಇಂತಹ ಕೆಲವು ಸಂದೇಹಗಳೊಂದಿಗೆ ನೀವು ಹೋರಾಡಿದ್ದಿರೋ? ನೆನಪಿನಲ್ಲಿಡಿ ಇವು ನಿಮ್ಮ ವೈರಿಯಿಂದ ಬರುತ್ತಿವೆ. ಅವನು ನಿಮ್ಮನ್ನು ಕುಂದಿಸಿ ಬೀಳಿಸಬೇಕೆಂದು ಪ್ರಯತ್ನಿಸುತ್ತಿದ್ದಾನೆ. ಕೆಲವರು ರಕ್ಷಿಸಲ್ಪಟ್ಟಾಗ ಬೇರೆಯವರಿಗಿಂತ ಹೆಚ್ಚು ಸಂತೋಷವುಳ್ಳವಾಗಿರುತ್ತಾರೆ; ಆದುದರಿಂದ ನೀವು ನಿಮ್ಮ ಭಾವನೆಗಳ ಕುರಿತು ಚಿಂತಿಸದಿರಿ. ಆತನ ಮಗುವಾಗಿರುವ ನೀವು ದೇವರು ಮಾಡಿರುವುದನ್ನು ಹೆಚ್ಚಾಗಿ ಕಲಿತ ಹಾಗೆ ನಿಮ್ಮಲ್ಲಿ ಹೆಚ್ಚು ಸಂತೋಷವಿರುವುದು, ಆತನ ಆಶೀರ್ವಾದಗಳಿಗಾಗಿ ನೀವು ಆತನನ್ನು ಸ್ತುತಿಸಿದಷ್ಟು ನಿಮ್ಮಲ್ಲಿ ಸಂತೋಷವು ವೃದ್ಧಿಯಾಗುವುದು. ನೆನಪಿನಲ್ಲಿಡಿ ನಿಮ್ಮ ರಕ್ಷಣೆಯು ನಿಮ್ಮ ಅನುಸುವಿಕೆಯ ಹೌದು ಅಥವಾ ಇಲ್ಲ ಎಂಬುದರ ಮೇಲೆ ಆಧಾರಗೊಂಡಿಲ್ಲ, ಆದರೆ ಅದು

ನಿಮ್ಮ ಜೀವಿತವನ್ನು ನೀವು ಒಪ್ಪಿಸಿಕೊಟ್ಟಾತನಾದ ನಂಬಿಗಸ್ತನಾದ ದೇವರ ಮೇಲೆಯೇ ಆಧಾರಗೊಂಡಿದೆ.



ಒಂದು ವೇಳೆ ನೀವು ಎಡವಿಬಿದ್ದಿದ್ದರೆ, ನೀವು ನಡೆಯುವುದನ್ನು ಕಲಿಯಬಾರದೆಂದಾಗಲಿ ಇಲ್ಲವೆ ನೀವು ದೇವರ ಮಗುವಲ್ಲವೆಂದಾಗಲಿ ಎಂದರ್ಥವಲ್ಲ. ನಿಮ್ಮ ಸೋಲುವಿಕೆಗಾಗಿ ಆತ ಕ್ಷಮೆಯನ್ನು ಯಾಚಿಸಿರಿ ಮತ್ತು ಎದ್ದು ನಡೆಯಲು ಪ್ರಯತ್ನಿಸಿರಿ.

ದೇವರನ್ನು ಮೆಚ್ಚಿಸುವ ನಿಮ್ಮ ಬಯಕೆಯು ಮತ್ತು ಸೋಲುವಿಕೆಯ ಕುರಿತು ನಿಮ್ಮ ಚಿಂತೆಯು ನೀವು ಮಾರ್ಪಟಿದಕ್ಕ ಮತ್ತು ಹೊಸ ಸ್ವಭಾವವು ನಿಮ್ಮಲ್ಲಿರುವುದಕ್ಕು ಪುರಾವೆಗಳಿವೆ. ಆದುದರಿಂದ ಕುಂದಿಹೋಗದಿರಿ. ನೆನಪಿನಲ್ಲಿಡಿ. ನಡೆಯಲಿಕ್ಕೆ ಕಲಿಯಲು ಕೆಲವು ಮಕ್ಕಳಿಗೆ ಬೇರೆ ಮಕ್ಕಳಿಗಿಂತ ಹೆಚ್ಚಿನ ತೊಂದರೆಗಳಿರುತ್ತವೆ.

## ನೀವು ಮಾಡಬೇಕಾದದ್ದು

6. ನಿಮಗೆ ಕುಂದಿಹೋಗುವಿಕೆ ಮತ್ತು ದುಃಖವುಂಟಾದಾಗ ಒಂದು ಸಂಗತಿಯನ್ನು ನೆನಪಿನಲ್ಲಿಡಿ.
   ...ಅ) ನಿಜ ಶಿಷ್ಯರು ಯಾವಾಗಲೂ ಸಂತೋಷವುಳ್ಳವರಾಗಿರುತ್ತಾರೆ.
   ...ಆ) ಎಲ್ಲಾ ಶಿಷ್ಯರು ತಾವು ರಕ್ಷಿಸಲ್ಪಟ್ಟಾಗ ಒಂದೇ ರೀತಿಯಲ್ಲಿ ಸಂತೋಷವನ್ನು ಅನುಭವಿಸುತ್ತಾರೆ.
   ...ಇ) ಆತನ ಆಶೀರ್ವಾದಕ್ಕಾಗಿ ನೀವು ಸ್ತುತಿಸಿದಷ್ಟು ಹೆಚ್ಚಿನ ಸಂತೋಷವು ನಿಮ್ಮಲ್ಲಿ ಆಗುವುದು.
7. ನಿಮ್ಮ ರಕ್ಷಣೆಯು ಆಧಾರಗೊಂಡಿದ್ದು
   ...ಅ) ದೇವರ ನಂಬಿಗಸ್ತಿಕೆಯ ಮೇಲೆ
   ...ಆ) ನಿಮ್ಮ ಅನಿಸುವಿಕೆಯ ಮೇಲೆ
   ...ಇ) ನಿಮ್ಮ ಒಳ್ಳೇತನದ ಮೇಲೆ

ಉತ್ತರಗಳು: 6ಇ) ಆತನ ಆಶೀರ್ವಾದಕ್ಕಾಗಿ ನೀವು ಸ್ತುತಿಸಿದಷ್ಟು ಹೆಚ್ಚಿನ ಸಂತೋಷವು ನಿಮ್ಮಲ್ಲಿ ಆಗುವುದು 7ಅ) ದೇವರ ನಂಬಿಗಸ್ತಿಕೆಯ ಮೇಲೆ

## ನಿಮ್ಮ ತಂದೆಯು ನಿಮ್ಮನ್ನು ಪ್ರೀತಿಸುತ್ತಾನೆ

ಮಗುವು ಬಿದ್ದದ್ದಕ್ಕೆ ಪ್ರೀತಿಯುಳ್ಳ ತಂದೆ ತಾಯಿಗಳು ಮಗುವನ್ನು ಬೈಯುತ್ತಾರೆಂದಾಗಲಿ ಇಲ್ಲವೆ ಮಗುವು ಗಾಯ ಮಾಡಿಕೊಂಡು ಅಲ್ಲಿಯೇ ಬೀಳಲೆಂದು ಮಗುವನ್ನು ಬಿಟ್ಟು ಹೋಗುತ್ತಾರೆಂದಾಗಲಿ ನೀವು ಯೋಚಿಸುತ್ತೀರೋ? ಎಂದಿಗೂ ಇಲ್ಲ!!! ಅವರು ಮಗುವನ್ನು ಎತ್ತಿಕೊಂಡು ಸಮಾಧಾನಪಡಿಸುವರು ಮತ್ತು ಮಗುವು ಸರಿಯಾಗಿ ನಡೆಯುವವರೆಗೆ ಮಗುವನ್ನು ಹಿಡಿದಿರುತ್ತಾರೆ. ನಡೆಯುವುದಕ್ಕೆ ಪ್ರಾರಂಭಿಸುವ. ತನ್ನ ಮಗುವಿನ ಕುರಿತು ದೇವರು ಇದಕ್ಕಿಂತ ಕಡಿಮೆಯಾಗಿ ಮಾಡುವನೆಂದು ನೀವು ಯೋಚಿಸುತ್ತೀರೋ? ಸಾಧ್ಯವೇ ಇಲ್ಲ! ಈಗ ಪ್ರಾರ್ಥನೆಯಲ್ಲಿ ಆತನನ್ನು ನೋಡು ಮತ್ತು ಆತನಿಗೆ ಹೇಳು; "ತಂದೆಯೇ ನನ್ನ ಕೈಯನ್ನು ಹಿಡಿದದ್ದಕ್ಕಾಗಿ ಮತ್ತು ಹೇಗೆ ನಡೆಯಬೇಕೆಂಬುದನ್ನು ನೀವು ಕಲಿಸುತ್ತಿರುವುದಕ್ಕಾಗಿ ನಿನಗೆ ಸ್ತೋತ್ರ. ನಾನು ಬಲಹೀನನು ಆದರೆ ನಾನು ಏನು ಮಾಡಬೇಕೋ ಅದನ್ನು ಮಾಡುವಂತೆ ನೀನು ಸಹಾಯಮಾಡು.

ದೇವರು ನಿನ್ನನ್ನು ತನ್ನ ಪವಿತ್ರಾತ್ಮನಿಂದಲೂ ಮತ್ತು ತನ್ನ ವಾಕ್ಯವಾದ ಸತ್ಯವೇದದಿಂಲೂ ನಿನಗೆ ಮಾರ್ಗದರ್ಶನ ಕೊಡುವನೆಂದು ನೀನು ತಿಳಿದಿರಬೇಕು. ಪ್ರತಿದಿನ ಸತ್ಯವೇದ ಓದು ಮತ್ತು ಪ್ರಾರ್ಥಿಸು. ಇದರಿಂದ ನಿನಗೆ ಸಂದೇಹಗಳ ಮೇಲೆ ಮತ್ತು ಎಡವಿಕೆಯ ಮೇಲೆ ಹಿಡಿತ ತರಲು ಸಹಾಯವಾಗುವುದು.

### ನೀವು ಮಾಡಬೇಕಾದದ್ದು

8. ನೀವು ಎಡವಿದರೆ ಮತ್ತು ನೀನು ಮಾಡಬಾರದ್ದನ್ನು ಮಾಡಿದರೆ ನಿನ್ನ ಸ್ವರ್ಗದ ತಂದೆ ಏನನ್ನು ಮಾಡುವನೆಂದು ಯೋಚಿಸುತ್ತಿ?

   ...ಅ) ಕೋಪಗೊಂಡು ನಿನ್ನನ್ನು ಮನೆಯಿಂದ ಹೊರದೂಡುತ್ತಾನೆ

   ...ಆ) ನಿನ್ನನ್ನು ಕ್ಷಮಿಸಿ, ಒಳ್ಳೇಯದನ್ನು ಮಾಡಲು ನಿನಗೆ ಸಹಾಯಮಾಡುವನು.

...ಇ) ನಿನ್ನನ್ನು ಹಾಗೆಯೇ ಬಿಟ್ಟುಬಿಡುವನು

9. ದೇವರ ಪವಿತ್ರಾತ್ಮನು ನಿನ್ನನ್ನು ನಡಿಸಿ ನೀವು ನೀನು ಏನು ಮಾಡಬೇಕೋ ಅದನ್ನು ತಿಳಿಸುವನು ಯಾವಾಗ?

...ಅ) ಪ್ರತಿದಿನ ಸತ್ಯವೇದ ಓದಿ, ಪ್ರಾರ್ಥಿಸುವಾಗ

...ಆ) ತರಗತಿಯನ್ನು ನೋಡುವಾಗ

...ಇ) ಸ್ನೇಹಿತರ ಮಾತುಗಳನ್ನು ಕೇಳುವಾಗ

**ಉತ್ತರಗಳು** : 8ಅ) ನಿನ್ನನ್ನು ಕ್ಷಮಿಸಿ, ಒಳ್ಳೇಯದನ್ನು ಮಾಡಲು ನಿನಗೆ ಸಹಾಯ ಮಾಡುವನು 9ಅ) ಪ್ರತಿದಿನ ಸತ್ಯವೇದ ಓದಿ ಪ್ರಾರ್ಥಿಸುವುದರಿಂದ

---

## ಈಗ ನಿಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳಿರಿ

---

ನೀವು ರಕ್ಷಣೆಯನ್ನು ಹೊಂದಲು ಮಾಡಬೇಕಾದದ್ದೇನೆಂದು ದೇವರು ಹೇಳಿದ್ದನ್ನು ನೀವು ಒಂದು ವೇಳೆ ಮಾಡಿದಾಗಲೂ ನಿಮ್ಮಲ್ಲಿ ಇನ್ನೂ ಸಂದೇಹವಿರಬಹುದು. ಮನುಷ್ಯನು ತಾನು ರಕ್ಷಣೆಯನ್ನು ಹೊಂದಲು ಮಾಡಬೇಕಾದದ್ದೇನೆಂದು ಕ್ರಿಸ್ತನು ಸ್ಪಷ್ಟವಾಗಿ ತಿಳಿಸಿದ್ದಾನೆ: ಆದುದರಿಂದ ಈಗ ನೀವು ಆ ಕಾರ್ಯವನ್ನು ಮಾಡಿದ್ದಿರೋ ಎಂದು ನೋಡಿರಿ. ಒಂದು ವೇಳೆ ನೀವು ಆ ಕಾರ್ಯವನ್ನು ಇನ್ನೂ ಮಾಡಬೇಕಾದಲ್ಲಿ ಈಗ ಅದನ್ನು ಮಾಡಿರಿ ಮತ್ತು ನಿಮ್ಮ ರಕ್ಷಣೆಯ ಭರವಸೆಯನ್ನು ಪಡೆದುಕೊಳ್ಳಿರಿ.

ನೀವು ಹೊಸದಾಗಿ ಹುಟ್ಟಲು ಎರಡು ಕಾರ್ಯಗಳನ್ನು ಮಾಡಬೇಕೆಂದು ದೇವರು ಇಚ್ಛೆಸುತ್ತಾನೆ, ನಿಮ್ಮ ಪಾಪಕ್ಕಾಗಿ ಪಶ್ಚಾತ್ತಾಪಪಡಿರಿ ಮತ್ತು ಸುವಾರ್ತೆಯಲ್ಲಿ ನಂಬಿಕೆಯಿಡಿರಿ.

## ನೀವು ಮಾಡಬೇಕಾದದ್ದು

10. ನೀವು ಹೊಸದಾಗಿ ಹುಟ್ಟಲು ಏನು ಮಾಡಬೇಕೆಂದು ದೇವರು ಹೇಳುತ್ತಾನೆ.

...ಅ) ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡಿರಿ ಮತ್ತು ಸುವಾರ್ತೆಯಲ್ಲಿ ನಂಬಿಕೆಯಿಡಿರಿ.

...ಆ) ತಪಸ್ಸು ಮಾಡಿರಿ ಮತ್ತು ಸಭೆಗೆ ಸೇರಿರಿ

...ಇ) ನಿಮ್ಮ ಪಾಪಗಳು ಮುಚ್ಚಿಹೋಗುವಂತೆ ಒಳ್ಳೇಯದನ್ನು ಮಾಡಿರಿ

**ಉತ್ತರ** : 10ಅ) ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡಿರಿ ಮತ್ತು ಸುವಾರ್ತೆಯಲ್ಲಿ ನಂಬಿಕೆಯಿಡಿರಿ

## ಪಶ್ಚಾತ್ತಾಪಪಡಿರಿ

ನಿಮ್ಮ ಪಾಪಗಳಿಗಾಗಿ ಕ್ಷಮೆ ಕೇಳುವುದು ಮತ್ತು ಅವುಗಳಿಂದ ದೂರವಾಗುವುದೇ ಪಶ್ಚಾತ್ತಾಪವಾಗಿದೆ.

ಮಾರ್ಕ 1:15 ತಿರಿಗಿಕೊಂಡು ಸುವಾರ್ತೆಯನ್ನು ನಂಬಿರಿ

ದೇವರಿಗೆ ಅವಿಧೇಯರಾಗಿರುವುದಕ್ಕಾಗಿ ನಿಮ್ಮಲ್ಲಿ ದುಃಖ ಉಂಟೋ ನಿಮ್ಮ ಜೀವಿತದಲ್ಲಿರುವ ಪಾಪದ ಮೇಲೆ ಜಯ ಸಾಧಿಸಬೇಕೆಂದು ನೀವು ನಿಶ್ಚಯಿಸಿದ್ದೀರೋ? ಅಥವಾ ಕೆಲವು ಪಾಪಗಳನ್ನು ಇನ್ನೂ ಇಟ್ಟುಕೊಳ್ಳಬೇಕೆಂದಿದ್ದಿರೋ? ನಿಮ್ಮ ಸ್ವಂತ ಮಾರ್ಗವನ್ನು ಬಿಟ್ಟುಬಿಡಲು ನಿಮಗೆ ಇಷ್ಟ ಉಂಟೋ, ಮತ್ತು ಇಂದಿನಿಂದ ದೇವರಿಗೆ ಮೆಚ್ಚಿಕೆಯಾದದ್ದನ್ನು ಮಾತ್ರ ಮಾಡಲು ಇಷ್ಟ ಉಂಟೋ?

### ನೀವು ಮಾಡಬೇಕಾದದ್ದು

11. ಮಾರ್ಕ 1:15ರಲ್ಲಿ ಯೇಸು ಹೇಳಿದ ಮಾತುಗಳನ್ನು ಬಾಯಿ ಪಾಠ ಮಾಡಿರಿ

12. ಪಶ್ಚಾತ್ತಾಪವೆಂದರೆ

...ಅ) ನಿಮ್ಮ ಪಾಪಗಳಿಗಾಗಿ ದುಃಖ ಪಟ್ಟು ಅವುಗಳಿಂದ ದೂರವಾಗುವುದೇ

...ಆ) ಯಾಜಕನಿಗೆ ನಿಮ್ಮ ಪಾಪಗಳನ್ನು ಅರಿಕೆಮಾಡುವುದೇ

...ಇ) ಕ್ಷಮಾಪಣೆಯನ್ನು ಕೇಳಿ ಆ ಸಂಗತಿಗಳನ್ನು ತಿರುಗಿ ಮಾಡುವುದೇ

**ಉತ್ತರ** : 12ಅ) ನಿಮ್ಮ ಪಾಪಗಳಿಗಾಗಿ ದುಃಖಪಟ್ಟು ಅವುಗಳಿಂದ ದೂರವಾಗುವುದೇ

ಯಾರಾದರೂ ನೀವು ಕ್ಷಮಿಸಲಾರದಷ್ಟು ಕೆಟ್ಟದಾದ ರೀತಿಯಲ್ಲಿ ನಿಮ್ಮದ್ದೊಂದಿಗೆ ವರ್ತಿಸಿದ್ದಾರೋ? ದ್ವೇಷ ಮತ್ತು ಪ್ರತಿಕಾರಗಳು ಬಹುಭಯಂಕರ ಪಾಪಗಳಾಗಿವೆ, ಅವು ಅನೇಕರನ್ನು ಸ್ವರ್ಗಕ್ಕೆ ಹೋಗದಂತೆ ಮಾಡುತ್ತವೆ. ದೇವರು ಪ್ರೀತಿಸ್ವರೂಪಿಯಾಗಿದ್ದಾನೆ ಮತ್ತು ಆತನು ದ್ವೇಷದಿಂದ ಮತ್ತು ಹೊಟ್ಟೆಕಿಚ್ಚಿನಿಂದ ಕೂಡಿದ ಹೃದಯದಲ್ಲಿ ವಾಸಿಸಲಾರನು ಒಂದು ವೇಳೆ ನಿಮಗೆ ಯಾರಾದರ ವಿರುದ್ಧ ಏನಾದರೂ ಇದ್ದರೆ ಅದನ್ನು ಈಗಲೇ ಕ್ಷಮಿಸಿರಿ. ನಿಮ್ಮನ್ನು ಕೆಟ್ಟದಾದ ರೀತಿಯಲ್ಲಿ ನಡೆಯಿಸಿಕೊಂಡವರನ್ನು ನೀವು ಪ್ರೀತಿಸಲು ಸಹಾಯ ಮಾಡುವಂತೆ ದೇವರನ್ನು ಪ್ರಾರ್ಥಿಸಿರಿ.

ಮತ್ತಾಯ 6:15 ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವುದಿಲ್ಲ.

ಒಂದು ವೇಳೆ ನಿಮಗೆ ಯಥಾರ್ಥವಾಗಿ ಪಶ್ಚಾತ್ತಾಪಪಟ್ಟಿದ್ದಕ್ಕೆ ನಿಮ್ಮಲ್ಲಿ ಇನ್ನೂ ಸಂದೇಹವಿರುವುದಾದರೆ, ನೀವು ನಿಮ್ಮೆಲ್ಲಾ ಪಾಪಗಳಿಂದ ವಿಮುಖರಾಗುವ ಮೂಲಕ ಅವುಗಳನ್ನು ಇತ್ಯರ್ಥ ಮಾಡಬಹುದು ಮತ್ತು ಇಂದಿನಿಂದಲೇ ದೇವರು ತನ್ನ ಮಾರ್ಗವನ್ನು ನಿಮ್ಮ ಜೀವಿತದಲ್ಲಿಡಲು ನೀವು ನಿಮ್ಮ ಸ್ವಂತ ಮಾರ್ಗವನ್ನು ಬಿಟ್ಟುಕೊಡಿರಿ.

**ನೀವು ಮಾಡಬೇಕಾದದ್ದು**

13. ಒಂದು ವೇಳೆ ಯಾರಾದರೂ ನಿಮಗೆ ವಿರುದ್ಧವಾಗಿ ತಪ್ಪು ಮಾಡಿದರೆ, ನೀವು ಮಾಡಬೇಕಾದದ್ದೇನೆಂದರೆ

...ಅ) ನೀವು ಅವನನ್ನು ಎಷ್ಟೆಂದು ದ್ವೇಷಿಸುತ್ತಿರುವುದರ ಕುರಿತು ಸುಮ್ಮನಿರ್ರಿ

...ಆ) ಅವನನ್ನು ಈಗಲೇ ಕ್ಷಮಿಸಿರಿ

...ಇ) ಅವನು ಎಷ್ಟು ಕೆಟ್ಟವನೆಂದು ಎಲ್ಲರಿಗೂ ಹೇಳಿರಿ

ಉತ್ತರ : 13) ಅವನನ್ನು ಈಗಲೇ ಕ್ಷಮಿಸಿರಿ

## ಸುವಾರ್ತೆಯನ್ನು ನಂಬಿರಿ: ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡಿರಿ

ಸುವಾರ್ತೆ ಎಂದರೆ ಶುಭ-ವಾರ್ತೆ ಎಂದರ್ಥ. ಯೇಸುಕ್ರಿಸ್ತನಲ್ಲಿರುವ ರಕ್ಷಣೆಯ ಕುರಿತಾಗಿರುವುದಕ್ಕೆ ಶುಭ-ವಾರ್ತೆ ಎಂದರ್ಥ. ಕೆಳಗಿನ ಸುವಾರ್ತೆ ಬೋಧನೆಗಳು ಸತ್ಯವೇದದಿಂದ ಆರಿಸಿಕೊಂಡಿದ್ದು, ಇವುಗಳಲ್ಲಿ ನೀವು ನಂಬುವವುಗಳ ಮುಂದೆ ಹೌದು ಎಂದು ಬರೆಯಿರಿ.

- ದೇವರು ನಿಮ್ಮನ್ನು ಬಹಳವಾಗಿ ಪ್ರೀತಿ ಮಾಡಿದ್ದರಿಂದ ನಿಮ್ಮ ಪಾಪದ ಶಿಕ್ಷೆಯನ್ನು ತೆಗೆದುಹಾಕಲು ಆತನು ಯೇಸುವನ್ನು ಕಳುಹಿಸಿದನು.......
- ಯೇಸು ನಿಮ್ಮ ಪಾಪಗಳಿಗಾಗಿ ಸತ್ತನು. ನೀವು ಆತನನ್ನು ನಿಮ್ಮ ರಕ್ಷಕನೆಂದು ಮತ್ತು ಒಡೆಯನೆಂದು ಅಂಗೀಕಾರ ಮಾಡಿದರೆ ಆತನು ನಿಮ್ಮನ್ನು ಅವುಗಳಿಂದ ಬಿಡುಗಡೆ ಮಾಡುವನು...............
- ಯೇಸು ಸತ್ತವರೊಳಗಿಂದ ಎದ್ದು, ಸ್ವರ್ಗಕ್ಕೆ ಏರಿ ಹೋಗಿದ್ದಾನೆ. ಆತನು ನಿಮಗಾಗಿ ಪ್ರಾರ್ಥಿಸುತ್ತಿದ್ದಾನೆ ಮತ್ತು ನಿಮಗಾಗಿ ಒಂದು ಮನೆಯನ್ನು ಸಿದ್ಧಮಾಡುತ್ತಿದ್ದಾನೆ......................
- ನೀವು ಯೇಸುವನ್ನು ನಿಮ್ಮ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಾಗ, ನೀವು ದೇವರ ಮಗುವಾಗುವಿರಿ ಮತ್ತು ಆತನಲ್ಲಿ ನಿಮಗೆ ಹೊಸ ಜೀವವಿರುವುದು........................
- ಯೇಸು ತನ್ನ ಸ್ವಂತದವರಿಗಾಗಿ ತಿರಿಗಿ ಬರುವನು ಮತ್ತು ಅವರನ್ನು ತನ್ನೊಂದಿಗಿರಲು ಅವರ ಸ್ವರ್ಗದ ನಿತ್ಯ ನಿವಾಸಕ್ಕೆ ಕರೆದೊಯ್ಯುವನು....
- ಯೇಸು ಕ್ರಿಸ್ತನ ಕುರಿತಾಗಿರುವ ಈ ವಿಷಯಗಳಲ್ಲಿ ನಿಮಗೆ ನಂಬಿಕೆ ಉಂಟೋ............... ನೀವು ಆತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕಾರ ಮಾಡಿದ್ದೀರೋ?............ ಹಾಗಾದರೆ ಆತನಲ್ಲಿ ನಂಬಿಕೆಯಿಡಿರಿ. ಆತನ ವಾಗ್ದಾನಗಳನ್ನು ನಂಬಿರಿ.

ಅಪ್ಪೋ. ಕೃತ್ಯಗಳು 16:31 "ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು. ಆಗ ನೀನು ರಕ್ಷಣೆ ಹೊಂದುವಿ, ನಿನ್ನ ಮನೆಯವರೂ ರಕ್ಷಣೆ ಹೊಂದುವರು."

1 ಯೋಹಾನ 5:11,12 ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು. ಆ ಜೀವವು ಆತನ ಮಗನಲ್ಲಿ ಅದೇ ಎಂಬುದೇ. ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು: ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ.

## ನೀವು ಮಾಡಬೇಕಾದದು

14. ಸುವಾರ್ತೆ ಎಂದರೆ

...ಅ) ಯೇಸುಕ್ರಿಸ್ತನಲ್ಲಿರುವ ರಕ್ಷಣೆಯ ಕುರಿತಾಗಿರುವುದೇ ಶುಭವಾರ್ತೆಯು

...ಆ) ಪ್ರಸಂಗಿಸುವುದು.

...ಇ) ಸಭೆಯಲ್ಲಿ ನಂಬಿಕೆಯಿಡುವುದು

15. ಅಪ್ರೋ.ಕೃತ್ಯ. 16:31 ಮತ್ತು 1 ಯೋಹಾನ 5:11,12 ಬಾಯಿಪಾಠ ಮಾಡಿರಿ.

**ಉತ್ತರ** : 14ಅ) ಯೇಸುಕ್ರಿಸ್ತನಲ್ಲಿರುವ ರಕ್ಷಣೆಯ ಕುರಿತಾಗಿರುವುದೇ ಶುಭವಾರ್ತೆಯು

ಯೇಸುಕ್ರಿಸ್ತನಲ್ಲಿ ನಂಬಿಕೆಯಿಡುವುದೆಂದರೆ ನೀವು ಆತನಲ್ಲಿ ಭರವಸೆಯಿಡುವುದೇ. ಆತನು ನಿಮ್ಮನ್ನು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಪ್ರೀತಿಸುತ್ತಾನೆ. ಆತನು ನಿಮಗಾಗಿ ತಂದೆಯಲ್ಲಿ ಪ್ರಾರ್ಥಿಸುವನು. ಇದನ್ನು ಮಾಡುವುದಕ್ಕಾಗಿ ದೇವರು ಯೇಸುವನ್ನು ಮಾತ್ರ ಆರಿಸಿಕೊಂಡನು.

1 ತಿಮೊಥೆ 2:5 ಏಕಂದರೆ ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ, ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ.

ಅಪ್ರೋ ಕೃತ್ಯ. 4:12 ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ.

ಯೇಸು ಹೇಳಿದ್ದು: "ನಾನೇ ಮಾರ್ಗ" ನಿಮ್ಮೆಲ್ಲಾ ನಂಬಿಕೆಯನ್ನು ಆತನ ಮೇಲೆಯಿಡಿರಿ. ನೀವು ನಿಜವಾಗಲೂ ಪಶ್ಚಾತ್ತಾಪಪಟ್ಟಿದ್ದರೆ ಮತ್ತು ದೇವರ ವಾಗ್ದಾನಗಳಲ್ಲಿ ಹಾಗು ಕ್ರಿಸ್ತನನ್ನು ನಿಮ್ಮ ರಕ್ಷಕನೆಂದು ನಂಬಿಕೆಯಿಟ್ಟಿದ್ದರೆ ನೀವು ರಕ್ಷಿಸಲ್ಪಟ್ಟಿದ್ದೀರಿ.

## ನೀವು ಮಾಡಬೇಕಾದದ್ದು

16. ಸತ್ಯವೇದ ನಮಗೆ ಬೋಧಿಸುವುದೇನೆಂದರೆ

...ಅ) ಯೇಸು ದೇವರ ಬಳಿಗೆ ಹೋಗಲು ಮಾರ್ಗವಾಗಿದ್ದಾನೆ

...ಆ) ದೇವರ ಬಳಿಗೆ ಹೋಗಲು ಅನೇಕ ಮಾರ್ಗಗಳುಂಟು

**ಉತ್ತರ** : 16ಅ) ಯೇಸು ದೇವರ ಬಳಿಗೆ ಹೋಗಲು ಮಾರ್ಗವಾಗಿದ್ದಾನೆ.

ಯೇಸು ನಿಮ್ಮ ರಕ್ಷಕನೆಂದು ನಿಶ್ಚಯ ಮಾಡಿಕೊಳ್ಳಬೇಕೆಂದಿದ್ದೀರೋ ನಿಮ್ಮ ಜೀವನವನ್ನು ತಿರಿಗಿ ಪ್ರತಿಷ್ಠಿಸಿಕೊಂಡು, ಆತನೊಂದಿಗೆ ನಡೆಯುತ್ತೀರೆಂಬುದನ್ನು ನಿಶ್ಚಯಿಸಿಕೊಳ್ಳಬೇಕೆಂದಿದ್ದಿರೋ? ಹಾಗಾದರೆ ಈ ಮಾತುಗಳನ್ನು ಪ್ರಾರ್ಥನೆಯಲ್ಲಿ ಹೇಳಿರಿ:

**ಪ್ರಾರ್ಥನೆ**

ದೇವರೇ ನಿನ್ನ ಪ್ರೀತಿಗಾಗಿಯೂ ಮತ್ತು ಯೇಸುವನ್ನು ನನ್ನ ಸ್ಥಳದಲ್ಲಿ ಸಾಯಲು ಕಳುಹಿಸಿಕೊಟ್ಟದ್ದಕ್ಕಾಗಿ ನಿನಗೆ ಸ್ತೋತ್ರ. ನಾನು ಆತನನ್ನು ನನ್ನ ರಕ್ಷಕನನ್ನಾಗಿ ಮತ್ತು ಒಡೆಯನನ್ನಾಗಿ ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಪಾಪಗಳನ್ನು ಕ್ಷಮಿಸಿದ್ದಕ್ಕಾಗಿ ಮತ್ತು ನನ್ನನ್ನು ನಿನ್ನ ಮಗುವಾಗಿ ಮಾಡಿದ್ದಕ್ಕಾಗಿ ನಿನಗೆ ಸ್ತೋತ್ರ. ನಾನು ಒಳ್ಳೆಯವನಾಗಿಯೂ ವಿಧೇಯನಾಗಿಯೂ ಮತ್ತು ನಿನ್ನನ್ನು ಎಲ್ಲಾ ವಿಷಯಗಳಲ್ಲಿ ಮೆಚ್ಚಿಸುವವನಾಗಿಯೂ ಇರುವಂತೆ ನನಗೆ ಸಹಾಯಮಾಡು. ನಾನು ನಿನಗೆ ನನ್ನನ್ನು ಒಪ್ಪಿಸುತ್ತೇನೆ. ನನ್ನ ಜೀವಿತದಲ್ಲೆಲ್ಲಾ ನಿನ್ನೊಂದಿಗೆ ನಡೆಯಲು ನನಗೆ ಸಹಾಯ ಮಾಡು ಆಮೆನ್.